**ಪಾಠ–3** **ಏಪ್ರಿಲ್ 9–15**

# ಕಾಯಿನನು ಮತ್ತು ಅವನ ಪರಂಪರೆ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಆದಿಕಾಂಡ 4, ಇಬ್ರಿಯ 11:4, ಮೀಕಾ 6:7, ಯೆಶಾಯ 1:11, 1ನೇ ಕೊರಿಂಥ 10:13, 1ನೇ ಯೋಹಾನ 3:12, ಆದಿಕಾಂಡ 5, ಆದಿಕಾಂಡ 6:1–5.

**ಸ್ಮರಣವಾಕ್ಯ : "ನೀನು ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವುದಲ್ಲವೇ; ಅಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚಿಕೊಂಡಿರುವುದು ಆದರೂ ನೀನು ಅದನ್ನು ವಶಮಾಡಿಕೊಳ್ಳಬೇಕು ಎಂದು ಹೇಳಿದನು"** (ಆ.ಕಾಂಡ 4:7).

ಆದಿಕಾಂಡ ಪುಸ್ತಕದಲ್ಲಿ ಮನುಷ್ಯನು ಪಾಪದಲ್ಲಿ ಬಿದ್ದಮೇಲೆ ಆದಾಮ ಮತ್ತು ಹವ್ವಳು ತೋಟದಿಂದ ಹೊರದೊಬ್ಬಲ್ಪಡುತ್ತಾರೆ. ಅದರ ನಂತರ ಜನನ ಮತ್ತು ಮರಣಗಳು ಮುಂಚಿನ ಅಧ್ಯಾಯಗಳಲ್ಲಿ ದೇವರು ಹೇಳಿರುವ ಪ್ರವಾದನೆಗಳು ನೆರವೇರುವುದಕ್ಕಾಗಿ ಘಟಿಸುತ್ತವೆ. ಆದಿಕಾಂಡ 3 ಮತ್ತು 4ನೇ ಅಧ್ಯಾಯಗಳು ಒಂದೇ ತರದ ವಿಷಯಗಳನ್ನು ವಾಕ್ಯಗಳನ್ನು ಹೊಂದಿವೆ. ಪಾಪದ ವಿವರಣೆ (ಆ.ಕಾಂಡ 3:6–8ನ್ನು ಆ.ಕಾಂಡ 4:8ನೇ ವಚನಕ್ಕೆ ಹೋಲಿಸಿರಿ). ಭೂಮಿಗೆ ಬಂದ ಶಾಪಗಳು (ಆ.ಕಾಂಡ 3:17ನ್ನು ಆ.ಕಾಂಡ 4:11ಕ್ಕೆ ಹೋಲಿಸಿರಿ) ಹೊರ ಹಾಕುವುದು ಆ.ಕಾಂಡ 3:24ನ್ನು ಆ.ಕಾಂಡ 4:12,16 ವಚನಗಳಿಗೆ ಹೋಲಿಸಿರಿ).

ಆದಾಮ ಮತ್ತು ಹವ್ವಳು ಪಾಪ ಮಾಡಿದ ನಂತರ ಅವರಿಗೆ ದೇವರು ಮೊದಲು ಕೊಟ್ಟ ಪ್ರವಾದನೆಗಳು ಮತ್ತು ಮುನ್ಸೂಚನೆಗಳು ಹೇಗೆ ನೆರವೇರಿದವು ಎಂಬುದನ್ನು

* ಈ ವಾರದ ಪಾಠವನ್ನು ಏಪ್ರಿಲ್ 16ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.

ಎತ್ತಿತೋರುವ ಉದ್ದೇಶದಿಂದ ಈ ಸಾಮ್ಯತೆಗಳನ್ನು ಗಮನಿಸಬೇಕು. ಆದಾಮನನ್ನು ಏದೇನ್ ತೋಟದಿಂದ ಹೊರಗೆ ಹಾಕಿದ ನಂತರ ನಡೆದ ಈ ಪ್ರಥಮ ಘಟನೆಯು ನಿರೀಕ್ಷೆ ತರುವುದಾಗಿತ್ತು. ಹವ್ವಳು ಮೊದಲ ಮಗನನ್ನು ಹೆತ್ತಳು. ಈ ಘಟನೆಯಿಂದ ಮೆಸ್ಸೀಯನಿಗೆ ಸಂಬಂಧವಾಗಿರುವ ಪ್ರವಾದನೆಯ ವಾಗ್ದಾನವು ನೆರವೇರುವುದನ್ನು ಆಕೆಯು ಕಂಡಳು.

ಮುಂದಿನ ಘಟನೆಗಳು ಹೀಗಿವೆ. ಕಾಯಿನನು ಮಾಡಿದ ಕೊಲೆ, ಲೆಮಕೆನು ಮಾಡಿದ ಕೊಲೆ, ಮನುಷ್ಯನ ಆಯಸ್ಸು ಕಡಿಮೆಯಾದದ್ದು ಮತ್ತು ದುಷ್ಟತನವು ಹೆಚ್ಚಾದದ್ದು ಇವೆಲ್ಲವೂ ಆದಿಕಾಂಡ 3ನೇ ಅಧ್ಯಾಯದಲ್ಲಿ ಹೇಳಿರುವ ಶಾಪದ ನೆರವೇರಿಕೆಯಾಗಿದೆ. ಆದಾಗ್ಯೂ ಎಲ್ಲಾ ನಿರೀಕ್ಷೆಯು ಕಳೆದುಹೋಗಲಿಲ್ಲ.

**ಭಾನುವಾರ** **ಏಪ್ರಿಲ್ 10**

## ಕಾಯನನು ಮತ್ತು ಹೇಬೆಲನು

ಆದಿಕಾಂಡ 4:1,2 ವಚನಗಳನ್ನು ಓದಿರಿ. ಎರಡು ಮಕ್ಕಳು ಜನನದ ವಿಷಯದಲ್ಲಿ ಈ ವಚನಗಳಿಂದ ನಾವು ಏನನ್ನು ಕಲಿಯುತ್ತೇವೆ?

ಆದಾಮನು ಏದೇನ್ ತೋಟದಿಂದ ಹೊರಕ್ಕೆ ಹಾಕಲ್ಪಟ್ಟ ಕೂಡಲೇ ಸತ್ಯವೇದದ ಲೇಖಕನು ದಾಖಲಿಸಿದ ಮೊದಲ ಘಟನೆ ಎಂದರೆ ಮಗುವಿನ ಜನನ. ಆದಿಕಾಂಡ 4:1ನೇ ಇಬ್ರಿಯ ವಚನದಲ್ಲಿ 'ಕರ್ತನು' ಎಂಬ ಪದವು ನೇರವಾಗಿ ಒಬ್ಬ ಮನುಷ್ಯನಿಗೆ ಸಂಬಂಧಿಸುತ್ತದೆ. ನನಗೆ ಒಬ್ಬ ಮನುಷ್ಯನು ಬೇಕಾಗಿದೆ. ಆತನು ಕರ್ತನೇ ಆಗಿರಬೇಕು ಎಂಬುದಾಗಿ ಅನುವಾದಗೊಂಡಿದೆ. ಇಡೀ ವಚನವು ಇಂಟರ್‌ನ್ಯಾಷನಲ್ ಸ್ಟಾಂಡರ್ಡ್ ವರ್ಷನ್ ಪ್ರಕಾರ "ನಾನು ಗಂಡು ಮಗುವಿಗೆ ಜನ್ಮ ಕೊಟ್ಟಿದ್ದೇನೆ. ಆತನು ಕರ್ತನೇ" ಎಂದು ಹವ್ವಳು ತಾನು ಹೆತ್ತಮಗನನ್ನು ಕುರಿತು ಹೇಳುತ್ತಾಳೆ.

ಈ ಹವ್ವಳು ಆದಿಕಾಂಡ 3:15 ವಚನದಲ್ಲಿರುವ ಮೆಸ್ಸೀಯನ ಪ್ರವಾದನೆಯನ್ನು ಜ್ಞಾಪಕ ಮಾಡಿಕೊಂಡಳು ಮತ್ತು ತಾನು ತನ್ನ ರಕ್ಷಕನಿಗೆ ಜನ್ಮ ಕೊಟ್ಟಿದ್ದೇನೆಂದು ನಂಬಿಕೊಂಡಳು ಎಂಬುದನ್ನು ಪದಶಃ ಅನುವಾದಗೊಂಡಿರುವ ವಚನವು ಸೂಚಿಸುತ್ತದೆ. "ರಕ್ಷಕನ ಬರುವಿಕೆಯನ್ನು ಏದೇನ್ ತೋಟದಲ್ಲಿ ಮುಂದಾಗಿ ಹೇಳಲಾಗಿತ್ತು. ಆದಾಮ ಮತ್ತು ಹವ್ವಳು ಈ ವಾಗ್ದಾನವನ್ನು ಮೊಟ್ಟ ಮೊದಲಿಗೆ

ಕೇಳಿಸಿಕೊಂಡಾಗ ಅವರೀರ್ವರು ವಾಗ್ದಾನವು ತ್ವರಿತವಾಗಿ ನೆರವೇರಲಿ ಎಂದು ಆಶಿಸಿದರು. ಮೊದಲ ಮಗನು ಹುಟ್ಟಿದಾಗ ಅವರು ಅದನ್ನೇ ತಮ್ಮ ವಿಮೋಚಕನು ಎಂದುಕೊಂಡು ಸಂತೋಷದಿಂದ ಸ್ವಾಗತ ಮಾಡಿದರು" ಎಲೆನ್ ಜಿ ವೈಟಮ್ಮನವರ 'ದಿ ಡಿಸೈರ್ ಆಫ್ ಏಜಸ್'ನಲ್ಲಿ 31ನೇ ಪುಟ.

ದಿಟವಾಗಿಯೂ ಕಾಯಿನನು ಕಥೆಯ ಹೆಚ್ಚುಭಾಗವನ್ನು ಆವರಿಸಿಕೊಳ್ಳುತ್ತಾನೆ. ಆತನು ಚೊಚ್ಚಲು ಮಗನು ಮತ್ರವಲ್ಲ ಹೆತ್ತತಂದೆತಾಯಿಗಳು ಬಹುವಾಗಿ ಆರಾಧಿಸುವ ಒಬ್ಬ ಮಗನಾಗಿದ್ದನು. ಆದರೆ ಆದಿಕಾಂಡದ ವಚನವು ಹೇಳುವಂತೆ ಆತನು ಒಬ್ಬನೇ ಸೋದರನೂ ಸಹಾ ಆಗಿದ್ದನು. ಹವ್ವಳು ಕಾಯಿನನು ಹೆತ್ತಾಗ ಯೆಹೋವನ ಅನುಗ್ರಹದಿಂದ ಒಂದು ಗಂಡುಮಗುವನ್ನು ಪಡೆದಿದ್ದೇನೆಂದು ಸಂಭ್ರಮಪಟ್ಟುಕೊಂಡು ವಿಮರ್ಶೆ ಮಾಡಿ ಹೇಳಿದಳು. ಆದರೆ ಹೇಬೆಲನನ್ನು ಹೆತ್ತಾಗ ಆಕೆ ಏನನ್ನೂ ಹೇಳಲಿಲ್ಲ. ವಚನವು ಸಹಾ ಕಾಯಿನನ ಜನನದಲ್ಲಿ ಮಾಡದ ವಿವರಣೆಗೆ ಪ್ರತಿಯಾಗಿ ಹೇಬೆಲನ ಜನನದಲ್ಲಿ ಏನನ್ನೂ ಹೇಳುವುದಿಲ್ಲ. ತರುವಾಯ ಆತನ ತಮ್ಮನಾದ ಹೇಬೆಲನನ್ನು ಹೆತ್ತಳು" ಎಂದು ಸರಳವಾಗಿ ವರದಿ ಮಾಡುತ್ತದೆ (ಆ.ಕಾಂಡ 4:2).

ಕಾಯಿನ ಎಂಬುದು ಇಬ್ರಿಯ ಕ್ರಿಯಾಪದವಾಗಿದೆ ಇದು ಸ್ವಾಧೀನ ಮಾಡಿಕೊಳ್ಳುವುದು ಎಂದು ಅರ್ಥಕೊಡುತ್ತದೆ. ಹಾಗೆಂದರೆ ಅಮೂಲ್ಯವಾದ ಮತ್ತು ಬಲವುಳ್ಳದ್ದನ್ನು ಹೊಂದಿರುವುದು. ಇದಕ್ಕೆ ಪ್ರತಿಯಾಗಿ ಹೇಬೆಲ ಎಂಬ ಇಬ್ರಿಯ ಪದವು ಹಬೆ ಅಥವಾ ಉಸಿರು ಎಂಬ ಅರ್ಥವನ್ನು ಕೊಡುತ್ತದೆ (ಕೀರ್ತನೆ 144:4). ಇದನ್ನು 'ಬುದ್ಧಿಗೆ ಎಟುಕದ' ಶೂನ್ಯತೆ, ಯಾವ ವಸ್ತುವೂ ಇಲ್ಲದಿರುವುದು ಎಂಬುದಾಗಿ ವಿವರಿಸಬಹುದು. ಹೇಬೆಲ್ ಎಂಬ ಪದವು ಪ್ರಸಂಗಿ ಪುಸ್ತಕದಲ್ಲಿ ವ್ಯರ್ಥ ಎಂಬ ಅರ್ಥದಲ್ಲಿ ಬಹಳ ಸಲ ಉಪಯೋಗಿಸಲ್ಪಟ್ಟಿದೆ. ಗ್ರಂಥದಲ್ಲಿರುವುದಕ್ಕಿಂತ ಹೆಚ್ಚಿನದನ್ನು ಈ ಸಣ್ಣ ಸಣ್ಣ ವಚನಗಳಲ್ಲಿ ಓದುವುದಕ್ಕೆ ನಮಗೆ ಇಷ್ಟವಿಲ್ಲದಿದ್ದಾಗ್ಯೂ ಬಹುಶಃ ಇದರ ಉದ್ದೇಶವೇನೆಂದರೆ ಆದಾಮ ಮತ್ತು ಹವ್ವಳ ನಿರೀಕ್ಷೆಗೆ ವಿರಾಮ ಸಿಕ್ಕಿತು, ಅವರು ಕಾಯಿನನಲ್ಲಿ ಮಾತ್ರ ನಂಬಿಕೆ ಇಟ್ಟರು ಯಾಕೆಂದರೆ ಅವರು ಕಾಯಿನನನ್ನು ತಮ್ಮ ಸೋದರನನ್ನಾಗಿ ಕಾಣದೆ ವಾಗ್ದಾನದ ಮೆಸ್ಸೀಯನೆಂದು ನಂಬಿದ್ದರು.

ಜೀವನದಲ್ಲಿ ನಿಜವಾಗಿ ಹಬೆಯಂತೆ ತೋರುವ ವಿಷಯಳಿರುತ್ತವೆ, ಆದರೆ ನಾವು ಅವುಗಳನ್ನು ಅವುಗಳಿರುವುದಕ್ಕಿಂತ ಹೆಚ್ಚಿನದಾಗಿ ಪರಿಗಣಿಸುತ್ತೇವೆ. ಅವು ಯಾವುವು? ಯಾವುದು ಮುಖ್ಯ. ಯಾವುದು ಮುಖ್ಯವಲ್ಲ ಎಂಬುವಗಳ ಮಧ್ಯೆ ಇರುವ ವ್ಯತ್ಯಾಸವನ್ನು ತಿಳಿದುಕೊಳ್ಳುವುದು ಬಹಳ ಅವಶ್ಯಕವಾದುದು ಏಕೆ?

**ಸೋಮವಾರ** **ಏಪ್ರಿಲ್ 11**

## ಎರಡು ಅರ್ಪಣೆಗಳು (ಕಾಣಿಕೆಗಳು)

ಕಾಯಿನ ಮತ್ತು ಹೇಬೆಲ ಎಂಬ ಹೆಸರುಗಳಲ್ಲಿ ಬಿಂಬಿತವಾಗಿರುವ ಭಿನ್ನತೆ ಕೇವಲ ಅವರ ವ್ಯಕ್ತಿತ್ವಕ್ಕೆ ಸಂಬಂಧಪಟ್ಟಿರುವುದಿಲ್ಲ. ಈ ಭಿನ್ನತೆಯು ಅವರ ಕಸುಬುಗಳಲ್ಲಿಯೂ ವ್ಯಕ್ತವಾಗಿದೆ. ಕಾಯಿನನು ವ್ಯವಸಾಯಗಾರನಾಗಿದ್ದನು (ಆದಿಕಾಂಡ 4:2). ವ್ಯವಸಾಯಗಾರನಾಗಿ ಅವನು ದೈಹಿಕ ಪರಿಶ್ರಮಿಯಾಗಿದ್ದನು. ಆದರೆ ಹೇಬೆಲನು ಕುರಿಕಾಯುವವನಾಗಿ ಕರುಣೆ ಮತ್ತು ಸಂವೇದನೆಯುಳ್ಳ–ವನಾಗಿದ್ದನು.

ಕಾಯಿನನು ಭೂಮಿಯಲ್ಲಿ ಕಾಯಿಪಲ್ಯೆಗಳನ್ನು ಬೆಳೆಯುತ್ತಿದ್ದನು. ಹೇಬೆಲನು ಕುರಿಕಾಯುವವನಾಗಿದ್ದನು.

ಈ ಎರಡು ಕಸುಬುಗಳು ಎರಡು ತರದ ಕಾಣಿಕೆಗಳ ಸ್ವಭಾವವನ್ನು ಮಾತ್ರವೇ ಹೇಳುವುಗಳಾಗಿರದೆ. ಆ ಕಾಣಿಕೆಗಳಿಗೆ ಸಂಬಂಧಪಟ್ಟಹಾಗೆ ಎರಡ ವಿಭಿನ್ನ ಮಾನಸಿಕ ಪ್ರವೃತ್ತಿಗಳಿಗೆ ಮತ್ತು ಮನೋಭಾವಗಳಿಗೆ ಕಾರಣವಾಗಿವೆ. ಕಾಯಿನನು ತಾನು ಭೂಮಿಯಲ್ಲಿ ಬೆಳೆದ ಹುಟ್ಟುವಳಿಯನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕಾಗಿ ಕೆಲಸ ಮಾಡುತ್ತಿದ್ದನು, ಹೇಬೆಲನು ತನ್ನ ಕುರಿಗಳನ್ನು ಎಚ್ಚರದಿಂದ ಸಾಕಿ ಸಲುಹವ ಕೆಲಸ ಮಾಡುತ್ತಿದ್ದನು. ಆದಿಕಾಂಡ 4:1–5 ಮತ್ತು ಇಬ್ರಿಯ 11:4 ವಚನಗಳನ್ನು ಓದಿರಿ. ಯಾಕೆ ದೇವರು ಹೇಬೆಲನ ಕಾಣಿಕೆಯನ್ನು ಮೆಚ್ಚಿಕೊಂಡನು ಮತ್ತು ಕಾಯಿನನ ಕಾಣಿಕೆಯನ್ನು ತಿರಸ್ಕರಿಸಿದನು? ಇಲ್ಲಿ ಏನಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಹೇಗೆ?

ರಕ್ತಧಾರೆಯಿಲ್ಲದೆ ಪಾಪಪರಿಹಾರವಿಲ್ಲ ಮತ್ತು ತಮಗೆ (ಕಾಯಿನ ಮತ್ತು ಹೇಬೆಲ) ದೋಷ ಪರಿಹಾರಕ್ಕಾಗಿ ವಾಗ್ದಾನ ಮಾಡಲ್ಪಟ್ಟ ಯೇಸುಕ್ರಿಸ್ತನ ರಕ್ತದ ಮೇಲಿರುವ

ನಂಬಿಕೆಯನ್ನು ತೋರಿಸಲು ಹಿಂಡಿನಿಂದ ಚೊಚ್ಚಲು ಕುರಿಮರಿಯನ್ನು ಯಜ್ಞವಾಗಿ ಸಮರ್ಪಿಸಬೇಕಾಗಿತ್ತು. ಅದರ ಜೊತೆಗೆ ಭೂಮಿಯಲ್ಲಿ ಬೆಳೆದ ಮೊದಲ ಕಾಯಿಪಲ್ಯೆಗಳನ್ನು ದೇವರಿಗೆ ಕೃತಜ್ಞತಾ ಕಾಣಿಕೆಯಾಗಿ ಸಮರ್ಪಿಸಬೇಕಾಗಿತ್ತು" – ಎಲೆನ್ ಜಿ ವೈಟಮ್ಮನವರ ನಮ್ಮ ಪಿತೃಗಳು ಮತ್ತು ಪ್ರವಾದಿಗಳು ಎಂಬ ಪುಸ್ತಕದಲ್ಲಿ 71ನೇ ಪುಟ.

ಹೇಬೆಲನು ದೇವರ ಮಾತಿಗನುಗುಣವಾಗಿ ಕಾಯಿಪಲ್ಯೆಗಳನ್ನು ಅರ್ಪಿಸಿ ಕೃತಜ್ಞತೆ ತೋರುವುದರ ಜೊತೆಗೆ ಕುರಿಮರಿ ತೆಗೆದುಕೊಂಡು ಸರ್ವಾಂಗ ಹೋಮ ಮಾಡಿದನು. ಆದರೆ ಕಾಯಿನನು ಹಾಗೆ ಮಾಡಲೊಲ್ಲದೆ ಹೋದನು. ಆತನು ಹಿಂಡಿನಿಂದ ಚೊಚ್ಚಲು ಕುರಿಮರಿಯನ್ನು ತಂದು ಸಮರ್ಪಿಸಲಿಲ್ಲ, ನೆಲದಲ್ಲಿ ಬೆಳೆದ ಪ್ರಥಮ ಫಲಗಳನ್ನು ಸಮರ್ಪಿಸಿದನು. ಇದು ಆತನು ದೇವರಿಗೆ ತೋರಿಸಿದ ಪ್ರತ್ಯಕ್ಷ ಅವಿಧೇಯತೆಯ ಕಾರ್ಯವಾಗಿತ್ತು ಮತ್ತು ಹೇಬೆಲನು ತೋರಿಸಿದ ಮನೋಧೋರಣೆಗೆ ವ್ಯತಿರಿಕ್ತವಾಗಿತ್ತು. ಈ ಪ್ರಸಂಗವನ್ನು (ಘಟನೆಯನ್ನು) ಬಹಳ ಸಲ ನಂಬಿಕೆಯಿಂದಲೇ ರಕ್ಷಣೆ ಎಂಬ ಉಪದೇಶಕ್ಕೆ ಉತ್ತಮ ನಿದರ್ಶನವಾಗಿ ಪರಿಗಣಿಸಲಾಗುತ್ತದೆ (ಹೇಬೆಲನು ಮತ್ತು ಯಜ್ಞಸಮರ್ಪಣೆ). ಇದಕ್ಕೆ ಪ್ರತಿಯಾಗಿ ತನ್ನ ಸ್ವಂತ ಕ್ರಿಯೆಗಳಿಂದ ರಕ್ಷಣೆಯನ್ನು ಹೊಂದಲು ಮಾಡುವ ಪ್ರಯತ್ನಕ್ಕೆ ಕಾಯನದು ತಕ್ಕ ಉದಾಹರಣೆಯಾಗಿದೆ (ಕಾಯನನು ಮತ್ತು ಆತನ ಕಾಯಿಪಲ್ಯೆ ಸಮರ್ಪಣೆ).

ಕಾಯಿನನು ಮತ್ತು ಹೇಬೆಲನು ಅರ್ಪಿಸಿದ ಕಾಣಿಕೆಗಳಿಗೆ ಆಧ್ಯಾತ್ಮಿಕವಾದ ಮಹತ್ವಗಳಿದ್ದಾಗ್ಯೂ ಇವುಗಳಲ್ಲಿ ಯಾವುದೇ ಚಮತ್ಕಾರ ಮಾಡುವ ಮೌಲ್ಯಗಳಿರುವುದಿಲ್ಲ. ಇವುಗಳು ಯಾವಾಗಲೂ ಪಾಪಿಗಳಾದ ನಮಗೆ ಜೀವನಾಧಾರವನ್ನು ಮಾತ್ರವಲ್ಲದೆ ವಿಮೋಚನೆಯನ್ನು ಒದಗಿಸುವ ದೇವರ ಕಡೆಗೆ ನಮ್ಮ ದೃಷ್ಟಿಯಿಡುವಂತೆ ಸೂಚಿಸುವಂತಹ ಕೇವಲ ಸಂಕೇತಗಳಾಗಿವೆ ಮತ್ತು ಪ್ರತಿರೂಪಗಳಾಗಿವೆ.

ಮೀಕ 6:7 ಮತ್ತು ಯೆಶಾಯ 1:11 ವಚನಗಳನ್ನು ಓದಿರಿ. ಈ ವಚನಗಳಲ್ಲಿರುವ ತತ್ವವನ್ನು ತೆಗೆದುಕೊಂಡು ನಮ್ಮ ಜೀವಿತಕ್ಕೂ ಆರಾಧನೆಗೂ ಹೇಗೆ ಅನ್ವಯ ಮಾಡಿಕೊಳ್ಳಬಹುದು?

ಮಂಗಳವಾರ ಏಪ್ರಿಲ್ 12

## ಅಪರಾಧ

ಆದಿಕಾಂಡ 4:3–8 ವಚನಗಳನ್ನು ಓದಿರಿ. ಯಾವ ಆಲೋಚನ ಪ್ರಕ್ರಿಯೆಯು ಕಾಯಿನನು ತನ್ನ ತಮ್ಮನನ್ನು ಕೊಲ್ಲುವುದಕ್ಕೆ ನಡಿಸಿತು? 1 ಯೋಹಾನ 3:12ನ್ನೂ ಸಹಾ ನೋಡಿರಿ.

ಕಾಯಿನನ ಪ್ರತಿಕ್ರಿಯೆಯು ಎರಡು ಪಟ್ಟಾಗಿತ್ತು: ಕಾಯಿನನು ಬಹಳವಾಗಿ ಕೋಪಗೊಂಡನು ಮತ್ತು ಅವನ ಮುಖವು ಕಳೆಗುಂದಿತು (ಆ.ಕಾಂಡ 4:5). ಕಾಯಿನನ ಕೋಪವು ಇನ್ನೊಬ್ಬರ ಮೇಲೆ ಹರಿಹಾಯುವಂಥದ್ದು ಆತನು ದೇವರ ಮೇಲೆ ಮತ್ತು ಹೇಬೆಲನ ಮೇಲೆ ಹರಿಹಾಯ್ದನು. ತಾನು ದೇವರ ಅನ್ಯಾಯಕ್ಕೆ ಬಲಿಯಾಗಿದ್ದೇನೆ ಎಂದುಕೊಂಡು ದೇವರ ಮೇಲೆ ಕೋಪಗೊಂಡನು ಮತ್ತು ಹೇಬೆಲನ ಮೇಲೆ ಅಸೂಯೆಪಟ್ಟುಕೊಂಡು ಕೋಪಗೊಂಡನೆಂದು ತೋರುತ್ತದೆ. ಯಾವುದರ ಮೇಲೆ ಆತನಿಗೆ ಅಸೂಯೆ? ಕೇವಲ ಕಾಣಿಕೆಯ ವಿಷಯದಲ್ಲಿಯೇ? ಖಂಡಿತವಾಗಿಯೂ ಈ ವಚನಗಳಲ್ಲಿ ವ್ಯಕ್ತವಾಗಿರುವುದಕ್ಕಿಂತ ಹೆಚ್ಚಿನದು ಈ ದೃಶ್ಯದ ಹಿಂದೆ ನಡೆಯುತ್ತಿತ್ತು. ವಿಷಯವು ಏನೇ ಇರಲಿ ತನ್ನ ಕಾಣಿಕೆ ತಿರಸ್ಕೃತವಾದುದರಿಂದ ಕಾಯಿನನು ಖಿನ್ನತೆಗೆ ಒಳಗಾದನು.

ಆದಿಕಾಂಡ 4:6ರಲ್ಲಿ ದೇವರು ಕೇಳಿದ ಎರಡು ಪ್ರಶ್ನೆಗಳು ಕಾಯಿನನ ಎರಡು ಪರಿಸ್ಥಿತಿಗೆ ಸಂಬಂಧಪಡುತ್ತದೆ. ದೇವರು ಕಾಯಿನನ ಮೇಲೆ ಯಾವುದೇ ಆಪಾದನೆ ಮಾಡಲಿಲ್ಲವೆಂಬುದನ್ನು ಗಮನಿಸಬೇಕು. ದೇವರು ಹೇಗೆ ಆದಾಮನನ್ನು ಪ್ರಶ್ನಿಸಿದನೋ ಹಾಗೆಯೇ ಕಾಯಿನನನ್ನೂ ಪ್ರಶ್ನಿಸುತ್ತಾನೆ. ತನಗೆ ಉತ್ತರಗೊತ್ತಿಲ್ಲವೆಂತಲ್ಲ ಆದರೆ ಕಾಯಿನನು ತನ್ನ ಈ ಪರಿಸ್ಥಿತಿಗೆ ಏನು ಕಾರಣ ಎಂಬುದನ್ನು ಅರ್ಥ ಮಾಡಿಕೊಳ್ಳಲು ತನ್ನನ್ನು ತಾನೇ ಪರೀಕ್ಷಿಸಿಕೊಳ್ಳಲಿ ಎಂಬ ಉದ್ದೇಶದಿಂದ ಹಾಗೆ ಪ್ರಶ್ನಿಸಿದನು. ದೇವರು ಬಿದ್ದುಹೋದ ತನ್ನ ಜನರನ್ನು ವಿಮೋಚಿಸಲು ಯಾವಾಗಲೂ ಬಯಸಿದಂತೆಯೇ ತನ್ನನ್ನು ಪ್ರತ್ಯಕ್ಷವಾಗಿ ಸೋಲಿಸಿದಾಗಲೂ (ನೇರವಾಗಿ ಅಲ್ಲಗಳೆದಾಗಲೂ) ವಿಮೋಚಿಸಬಯಸುತ್ತಾನೆ. ಈ ಪ್ರಶ್ನೆಗಳನ್ನು ಕೇಳಿದ ಮೇಲೆ ದೇವರು ಕಾಯಿನನಿಗೆ ತಕ್ಕ ಸಮಾಲೋಚನೆಗಳನ್ನು ನೀಡುತ್ತಾನೆ.

ಪ್ರಥಮವಾಗಿ ದೇವರು ಕಾಯಿನನಿಗೆ ಒಳ್ಳೇ ಕೆಲಸ ಮಾಡು ಅಂದರೆ ಸರಿಯಾದ ರೀತಿಯಲ್ಲಿ ವರ್ತಿಸು ಎಂದು ಪ್ರೇರೇಪಿಸುತ್ತಾನೆ. ಇದು ಪಶ್ಚಾತ್ತಾಪಪಡಲು ಮತ್ತು ಮನೋಭಾವವನ್ನು ಪರಿವರ್ತಿಸಿಕೊಳ್ಳಲು ದೇವರು ನೀಡಿದ ಕರೆಯಾಗಿದೆ. ದೇವರು ಕಾಯಿನನ್ನು ಅಂಗೀಕರಿಸಿಕೊಂಡು ಆತನನ್ನು ಕ್ಷಮಿಸಲು ವಾಗ್ದಾನ ಮಾಡಿದ್ದನು. ಹೇಗೆಂದರೆ ಕಾಯಿನನು ದೇವರ ನಿಯಮಾನುಸಾರ ಅಂಗೀಕರಣೆಯನ್ನು ಹೊಂದಬಹುದಾಗಿತ್ತು. ಆದರೆ ತನ್ನ ನಿಯಮಾನುಸಾರವಲ್ಲ.

ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ನೀನು ಒಳ್ಳೇ ಕೆಲಸ ಮಾಡದೇ ಹೋದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಯಸಿ ಬಾಗಿಲಲ್ಲಿ ಹೊಂಚಿಕೊಂಡಿರುವುದು ಆದರೂ ನೀನು ಅದನ್ನು ವಶಪಡಿಸಿಕೊಳ್ಳಬೇಕೆಂದು ಹೇಳುತ್ತಾನೆ (ಆದಿಕಾಂಡ 4:17). ದೇವರು ಕೊಟ್ಟ ಸಲಹೆಯು ಪಾಪದ ಮೂಲವು ಯಾವುದೆಂದು ತೋರಿಸಿತು. ಅದರ ಮೂಲವು ಕಾಯಿನನಲ್ಲಿ ಇತ್ತು. ದೇವರು ಕಾಯಿನನು ನಡೆಯಬೇಕಾದ ಮಾರ್ಗದಲ್ಲಿ ನಡೆಸುವುದಕ್ಕೋಸ್ಕರ ಪುನಃ ಆತನಿಗೆ ಬುದ್ಧಿಮಾತು ಹೇಳುತ್ತಾನೆ.

ಪಾಪದ ವಿಷಯದಲ್ಲಿ ತೋರಿಸಬೇಕಾದ ಮನೋಭಾವದ ಬಗ್ಗೆ ದೇವರು ಎರಡನೆಯ ಸಲಹೆಯನ್ನು ಕೊಡುತ್ತಾನೆ. ಪಾಪವು ಬಾಗಿಲಲ್ಲೇ ಹೊಂಚಿ–ಕೊಂಡಿರುವುದು ಅದು ನಿನ್ನನ್ನು ಬಯಸುತ್ತದೆ. ಆದುದರಿಂದ ಅದನ್ನು ವಶಪಡಿಸಿಕೊಳ್ಳಬೇಕೆಂದು ಅದಕ್ಕಾಗಿ ಸ್ವನಿಗ್ರಹವನ್ನು ಶಿಫಾರಸ್ಸು ಮಾಡುತ್ತಾನೆ. ಇದೇ ನಿಯಮವು ಯಾಕೋಬನ ಪತ್ರಿಕೆಯಲ್ಲಿಯೂ ಮಾರ್ದನಿಗೊಳ್ಳುತ್ತದೆ. "ಪ್ರತಿಯೊಬ್ಬನು ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡುವನಾಗಿ ಪ್ರೇರೇಪಿಸಲ್ಪಡುತ್ತಾನೆ" (ಯಾಕೋಬನು 1:14). ಸುವಾರ್ತೆಯು ನಮ್ಮ ಪಾಪಕ್ಕೆ ಕ್ಷಮಾಪಣೆ ನೀಡುವುದು ಮಾತ್ರವಲ್ಲ ಜೊತೆಗೆ ಪಾಪದ ಮೇಲೆ ಜಯವನ್ನು ಸಹಾ ವಾಗ್ದಾನ ಮಾಡುತ್ತದೆ (1 ಕೊರಿಂಥ 10:13).

ಕಾಯಿನನು ತಾನು ಎಸಗಿದ ಪಾಪಕ್ಕೆ ತಾನೇ ಕಾರಣನಾಗಿದ್ದನು. ಆದ್ದರಿಂದ ಆತನು (ಮತ್ಯಾರನ್ನೂ) ನಿಂದಿಸುವಂತಿಲ್ಲ. ಇದು ತಾನೇ ಸಾಮಾನ್ಯವಾಗಿ ಎಲ್ಲರ ವಿಷಯದಲ್ಲೂ ನಡೆಯುವುದು ಅಲ್ಲವೇ?

ಮನುಷ್ಯನಿಗಿರುವ ಆಯ್ಕೆಯ ಸ್ವಾತಂತ್ರ್ಯದ ಬಗ್ಗೆ ಈ ದೌರ್ಭಾಗ್ಯದ ಕಥೆ ನಮಗೆ ಏನನ್ನು ಬೋಧಿಸುತ್ತದೆ ಮತ್ತು ದೇವರು ನಮ್ಮ ವಿಧೇಯತೆಗೆ ಬಲವಂತಪಡಿಸುವುದಿಲ್ಲ ಹೇಗೆ?

**ಬುಧವಾರ** **ಏಪ್ರಿಲ್ 13**

## ಕಾಯಿನನಿಗಾದ ಶಿಕ್ಷೆ

ಆದಿಕಾಂಡ 4:9–16 ವಚನಗಳನ್ನು ಓದಿರಿ. ದೇವರು ಕಾಯಿನನಿಗೆ ನಿನ್ನ ತಮ್ಮನಾದ ಹೇಬೆಲನು ಎಲ್ಲಿ ಎಂದು ಕೇಳುತ್ತಾನೆ ಏಕೆ? ಕಾಯಿನನು ಮಾಡಿದ ಪಾಪಕ್ಕೂ ಆತನು ಲೋಕದಲ್ಲಿ ಅಲೆಯುವವನೂ ದೇಶಭ್ರಷ್ಟನೂ ಆಗಬೇಕಾದುದಕ್ಕೂ ಏನು ಸಂಬಂಧವಿದೆ (ಆ.ಕಾಂಡ 4:12)?

ದೇವರು ಕಾಯಿನನಿಗೆ ಕೇಳಿದ ಪ್ರಶ್ನೆಯು ಆತನು ಆದಾಮನಿಗೆ ಏದೇನಿನಲ್ಲಿ ನೀನು ಎಲ್ಲಿರುತ್ತಿ?" ಎಂದು ಕೇಳಿದ ಪ್ರಶ್ನೆಯನ್ನು ಪ್ರತಿಧ್ವನಿಸುತ್ತದೆ. ಈ ಪ್ರತಿಧ್ವನಿಯು ಏದೇನ್ ತೋಟದ ಒಳಗೆ ನಡೆದ ಪಾಪಕ್ಕೂ ಹೊರಗೆ ನಡೆದ ಪಾಪಕ್ಕೂ ಇರುವ ಸಂಬಂಧವನ್ನು ಸೂಚಿಸುತ್ತದೆ. ಈವಾಗ ಕಾಯಿನನು ಮಾಡಿದ ಪಾಪವು ಹಿಂದೆ ಆದಾಮನು ಮಾಡಿದ್ದ ಪಾಪದ ಫಲಿತಾಂಶವಾಗಿದೆ.

ಕಾಯಿನನು ತಾನು ಮಾಡಿದ ಪಾಪವನ್ನು ಒಪ್ಪಿಕೊಳ್ಳದೆ ಅದನ್ನು ಅಲ್ಲಗಳೆಯುತ್ತಾನೆ, ಆದಾಮನು ತನ್ನ ತಪ್ಪನ್ನು ಬೇರೆಯವರ ಮೇಲೆ ಹಾಕಲು ಪ್ರಯತ್ನಿಸಿದಾಗ್ಯೂ ಕಾಯಿನನಂತೆ ಅಲ್ಲಗಳೆಯಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಕಾಯಿನನು ದೇವರನ್ನು ನೇರವಾಗಿ ಎದುರಿಸುತ್ತಾನೆ. ಅಪರಾಧವನ್ನೂ ನಡಿಸಿಯೂ ಹಠ ಸಾಧಿಸುತ್ತಿರುವ ಕಾಯಿನನಿಗೆ ದೇವರು ಸಮಯಾವಕಾಶವನ್ನು ಕೊಡಲಿಲ್ಲ. ಕೂಡಲೇ ಆತನು ನೀನು ಏನು ಮಾಡಿದಿ? ಎಂದು ಪ್ರಶ್ನಿಸುತ್ತಾನೆ (3ನೇ ಪ್ರಶ್ನೆ) ಮತ್ತು ಕಾಯಿನನ ಉತ್ತರಕ್ಕೂ ಕಾಯದೆ ತನಗೆ ಹೇಬೆಲನ ಕೊಲೆಯಾದುದು ಗೊತ್ತಿದೆ ಎಂಬುದು ಸೂಚಿಸಲು ಅಲಂಕಾರಿಕ ಭಾಷೆಯಲ್ಲಿ ನಿನ್ನ ತಮ್ಮನ ರಕ್ತವು ಭೂಮಿಯ ಕಡೆಯಿಂದ ನನ್ನನ್ನು ಕೂಗುತ್ತಿದೆ ಎಂದು ದೇವರು ಹೇಳುತ್ತಾನೆ (ಆ.ಕಾಂಡ 4:10). ಹೇಬೆಲನು ಮಣ್ಣಿಗೆ ಸೇರಿದನು. ದೇವರು ಹೇಳಿದ ಈ ಮಾತು ಆದಾಮನು ಪಾಪ ಮಾಡಿದಾಗ ಅದರ ನಿಮಿತ್ತ ಆತನಿಗೆ ಒದಗಿದ ಅವಸ್ಥೆಗೆ ನೇರವಾಗಿ ಸಂಬಂಧಪಡುತ್ತದೆ (ಆದಿಕಾಂಡ 3:19ನ್ನು ನೋಡಿರಿ).

ಆ.ಕಾಂಡ 4:14ನ್ನು ಓದಿರಿ. ಕಾಯಿನನು "ನನಗೆ ನಿನ್ನ ಸಾನಿಧ್ಯವು ತಪ್ಪಿ ಹೋಯಿತು" ಎಂದು ದೇವರಿಗೆ ಹೇಳುತ್ತಾನೆ. ಇದರ ತಾತ್ಪರ್ಯವೇನು?

ಹೇಬೆಲನ ರಕ್ತವು ಭೂಮಿಗೆ ಸುರಿಸಲ್ಪಟ್ಟಿದ್ದರಿಂದ ಆತನ ರಕ್ತವನ್ನು ಕುಡಿದ ಭೂಮಿಗೆ ಮತ್ತೆ ಶಾಪ ಬಂತು (ಆ.ಕಾಂಡ 4:12). ಆದಕಾರಣ ಕಾಯಿನನಿಗೆ ದೇವರಿಂದ ದೂರವಾಗಿ ಲೋಕದಲ್ಲಿ ಅಲೆಯುವ ಶಿಕ್ಷೆಯಾಯಿತು. ದೇವರು ಆತನಿಗೆ ಶಿಕ್ಷೆಕೊಟ್ಟ ಮೇಲೆ ದೇವರ ಸಾನಿಧ್ಯ ತನಗೆ ತಪ್ಪಿಹೋಯಿತು ತನ್ನ ಪ್ರಾಣಕ್ಕೆ ಅಪಾಯವಿದೆ ಎಂಬುದನ್ನು ಮನಗಾಣುತ್ತಾನೆ. ಕಾಯಿನನು ತನ್ನ ತಮ್ಮನ್ನು ಕೊಲೆ ಮಾಡಿದಾಗ್ಯೂ ತಪ್ಪನ್ನು ಒಪ್ಪಿಕೊಳ್ಳಲಿಲ್ಲ. ಆದರೂ ದೇವರ ಆತನ ಮೇಲೆ ಕರುಣೆ ತೋರಿಸಿದನು. ಆತನಿಗೆ ರಕ್ಷಣೆ ಒದಗಿಸಿದನು (ಆದಿಕಾಂಡ 4:16). ಅವನನ್ನು ಕಂಡವರು ಕೊಲ್ಲಕೂಡದಂತೆ ಅವನ ಮೇಲೆ ಒಂದು ಗುರುತಿಟ್ಟನು. ಆ ಗುರುತು ಎಂಥದ್ದು ಎಂದು ನಮಗೆ ಹೇಳಲ್ಪಟ್ಟಿಲ್ಲ. ಆದರೆ ದೇವರ ಕೃಪೆಯಿಂದ ಮತ್ತು ಆತನಿಗೆ ಗುರುತು ಬಂತು.

"ನಿನ್ನ ಸಾನಿಧ್ಯವು ತಪ್ಪಿತು" (ಆ.ಕಾಂಡ 4:14). ದೇವರ ಸಾನಿಧ್ಯ ತಪ್ಪಿಹೋದಾಗ ಏನಾಗುತ್ತದೆ? ಯಾರಿಗಾದರೂ ಸರಿಯೇ ಇದು ಎಂಥಾ ದುರಂತವಾದುದು. ಪಾಪಿಗಳಾಗಿ ನಾವು ಇದನ್ನು ತಡೆಯುವ ಒಂದೇ ಮಾರ್ಗ ಯಾವುದು?

**ಗುರುವಾರ** **ಏಪ್ರಿಲ್ 14**

## ಮನುಷ್ಯನ ದುಷ್ಟತ್ವ

ಆದಿಕಾಂಡ 4:17–24 ವಚನಗಳನ್ನು ಓದಿರಿ. ಕಾಯಿನನ ಪರಂಪರೆ ಯಾವುದು ಮತ್ತು ಕಾಯಿನನು ಮಾಡಿದ ಅಪರಾಧ ನೂತನ ದುಷ್ಟತ್ವದ ಹೆಚ್ಚಳಕ್ಕೆ ದಾರಿಯನ್ನು ಹೇಗೆ ತೆರೆಯಿತು?

ಕಾಯಿನನ ಮೊಮ್ಮಗನ ಮೊಮ್ಮಗನಾದ ಲೆಮೆಕನು ತಾನು ದುಷ್ಕೃತ್ಯಗೈದ ಸಂದರ್ಭದಲ್ಲಿ ಕಾಯಿನನ ದುಷ್ಕೃತ್ಯವನ್ನು ಉದಾಹರಿಸುತ್ತಾನೆ. ಕಾಯಿನನು ಮತ್ತು ಲೆಮೆಕನು ಮಾಡಿದ ದುಷ್ಕೃತ್ಯಗಳ ಹೋಲಿಕೆಯು ನಮಗೆ ಬುದ್ಧಿಪಾಠವಾಗಿದೆ. ಕಾಯಿನನು ತಾನು ಮಾಡಿದ ಒಂದೇ ಒಂದು ದುಷ್ಕೃತ್ಯದ ಬಗ್ಗೆ ಮೌನವಹಿಸುತ್ತಾನೆ. ಆದರೆ ಲೆಮೆಕನು ಅದನ್ನು ರಾಗ ಕಟ್ಟಿಹಾಡುತ್ತಾ ಜಂಭ ಪಟ್ಟುಕೊಳ್ಳುತ್ತಾನೆ (ಆದಿಕಾಂಡ

4:23, 24). ತನ್ನ ಮೇಲೆ ಕರುಣೆ ತೋರಿಸಬೇಕೆಂದು ಕಾಯಿನನು ದೇವರನ್ನು ಕೇಳಿಕೊಳ್ಳುತ್ತಾನೆ. ಆದರೆ ಲೆಮೆಕನು ಹಾಗೆ ಮಾಡುವುದಿಲ್ಲ. ಕಾಯಿನನ್ನು ಕೊಲ್ಲುವವರಿಗೆ ಏಳರಷ್ಟು ಪ್ರತಿದಂಡನೆಯಾದರೆ ಲೆಮೆಕನನ್ನು ಕೊಲ್ಲುವವರಿಗೆ ಎಪ್ಪತ್ತೇಳರಷ್ಟು ಪ್ರತಿ ದಂಡನೆಯಾಗುತ್ತದೆ ಎಂದು ತನ್ನ ಬಗ್ಗೆ ಲೆಮೆಕನು ಹೇಳಿಕೊಳ್ಳುತ್ತಾನೆ (ಆ.ಕಾಂಡ 4:24ನ್ನು ನೋಡಿರಿ). ಇದು ಲೆಮೆಕನು ತನ್ನ ಅಪರಾಧದ ಬಗ್ಗೆ ಬಹಳಷ್ಟು ಅರಿವು ಹೊಂದಿದ್ದನೆಂದು ಸುಳುಹು ಕೊಡುತ್ತದೆ.

ಅಲ್ಲದೆ, ಕಾಯಿನನು ಏಕ ಪತ್ನಿಯುಳ್ಳವನು (ಆ.ಕಾಂಡ 4:17). ಲೆಮೆಕನು ಬಹುಪತ್ನಿತ್ವವನ್ನು ಜಾರಿಗೆ ತಂದವನು ಯಾಕೆಂದರೆ ಆತನು ಆದಾ ಮತ್ತು ಚೆಲ್ಲಾ ಎಂಬ ಇಬ್ಬರು ಹೆಂಡತಿಯನ್ನು ಮಾಡಿಕೊಂಡನು (ಆ.ಕಾಂಡ 4:19) ಎಂಬುದಾಗಿ ಸತ್ಯವೇದವು ಹೇಳುತ್ತದೆ. ದುಷ್ಟತ್ವವನ್ನು ಈ ರೀತಿಯಾಗಿ ಉನ್ನತ ಪಡಿಸುತ್ತಾ ತೀವ್ರ ಮಾಡುತ್ತಾ ಹೋದಂತೆ ಕಾಯಿನನ ಮುಂದಿನ ಸಂತಾನದವರ ಮೇಲೆ ಖಂಡಿತವಾಗಿಯೂ ಪರಿಣಾಮ ಉಂಟುಮಾಡಿತು.

ಕಾಯಿನನ ಕುಟುಂಬದಲ್ಲಿ ಈ ದುರ್ಘಟನೆಯು ನಡೆದ ಕೂಡಲೇ ಅದರ ಹಿಂದೆಯೇ ಇದಕ್ಕೆ ಪ್ರತಿಯಾಗಿ ಈ ಪ್ರತೀತಿಯನ್ನು ಮುರಿದುಹಾಕುವ ಮತ್ತೊಂದು ಹೊಸ ಘಟನೆ ನಡೆಯಿತು. ಏನೆಂದರೆ ಆದಾಮನು ತಿರುಗಿ ತನ್ನ ಹೆಂಡತಿಯನ್ನು ಕೂಡಲು ಆಕೆಯು ಗಂಡುಮಗುವನ್ನು ಹೆತ್ತು ಕಾಯಿನನು ಕೊಂದುಹಾಕಿದ ಹೇಬೆಲನಿಗೆ ಬದಲಾಗಿ ದೇವರು ತನಗೆ ಬೇರೆ ಸಂತಾನವನ್ನು ನೇಮಿಸದನೆಂದು ಆ ಮಗುವಿಗೆ ಸೇತನೆಂದು ಹೆಸರಿಟ್ಟಳು.

ನಿಜವಾಗಿಯೂ ಸೇತನ ಹೆಸರಿನ ಚರಿತ್ರೆಯು ಹೇಬೆಲನನ್ನು ಮುಂದುವರೆಸುತ್ತದೆ. ಸೇತ ಎಂಬುದು ಇಬ್ರಿಯ ಭಾಷೆಯ 'ಅಶಿತ್' ಎಂಬ ಕ್ರಿಯಾಪದವಾಗಿದೆ ಮತ್ತು ಯೇಸುಕ್ರಿಸ್ತನನ್ನು ಕುರಿತ ಪ್ರವಾದನೆಯನ್ನು ಪರಿಚಯಿಸುತ್ತದೆ (ಆ.ಕಾಂಡ 3:15 ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು). ಯೇಸುಕ್ರಿಸ್ತನು ಸೇತನ ಸಂತಾನದಲ್ಲಿ ಹುಟ್ಟಿಬಂದನು. ಸತ್ಯವೇದದಲ್ಲಿ ಆ.ಕಾಂಡ 5:3ನೇ ವಚನವು ಮೆಸ್ಸೀಯ ಸಂತಾನದ ಆರಂಭವನ್ನು ದಾಖಲಿಸುತ್ತದೆ. ಇದು ಹನೋಕನನ್ನು ಮೆತೂಷೆಲಹನನ್ನು ಸಹಾ ಒಳಗೊಂಡು ನೋಹನಲ್ಲಿ ಅಂತ್ಯಗೊಳ್ಳುತ್ತದೆ (ಆ.ಕಾಂಡ 6:8).

ದೇವಪುತ್ರರು ಎಂಬ ಪದವೃಂದವು (ಆ.ಕಾಂಡ 6:2) ಸೇತನ ಸಂತಾನವನ್ನು ಸೂಚಿಸುತ್ತದೆ. ಯಾಕೆಂದರೆ ದೇವರ ಸ್ವರೂಪವನ್ನು ಸಂರಕ್ಷಿಸುವ ಸಲುವಾಗಿ ಅವರು ಏರ್ಪಾಟುಗೊಂಡಿದ್ದಾರೆ (ಆ.ಕಾಂಡ 5:1,4). ಇದಕ್ಕೆ ಪ್ರತಿಯಾಗಿ 'ಮನುಷ್ಯ ಪುತ್ರಿಯರು" (ಆ.ಕಾಂಡ 6:2) ಎಂಬ ಪದವು ನಕರಾತ್ಮಕ ಅರ್ಥವನ್ನು ಹೊಂದಿದ್ದು ದೇವರ ಸ್ವರೂಪದಲ್ಲಿರುವವರ ಸಂತಾನವು ಮನುಷ್ಯ ಸ್ವರೂಪದವರಿಂದ ಹೇಗೆ ವ್ಯತ್ಯಾಸ ಹೊಂದಿದ್ದಾರೆಂದು ತೋರಿಸುತ್ತದೆ. ಈ ಮನುಷ್ಯಪುತ್ರಿಯರ ಪ್ರಭಾವಕ್ಕೆ ದೇವಪುತ್ರರು ಒಳಪಟ್ಟು ತಮಗೆ ಬೇಕೆನಿಸಿದವರನ್ನು ಹೆಂಡತಿಯರನ್ನಾಗಿ ಮಾಡಿಕೊಂಡರು (ಆ.ಕಾಂಡ 6:2) ಇದರಿಂದ ಮಾನವರು ತಪ್ಪಾದ ಮಾರ್ಗದಲ್ಲಿ ಮುಂದುವರೆದರು ಎಂಬುದನ್ನು ಈ ವಚನವು ನಮಗೆ ಸೂಚಿಸುತ್ತದೆ?

**ಶುಕ್ರವಾರ** **ಏಪ್ರಿಲ್ 15**

**ಹೆಚ್ಚಿನ ಚಿಂತನೆ :** ಹನೋಕನು ದೇವರ ಜೊತೆ ಅನ್ಯೋನ್ಯವಾಗಿ ನಡೆದುಕೊಂಡನು ಎಂಬ ಪದವೃಂದವು (ಆ.ಕಾಂಡ 5:22,24 ಎರಡು ಸಲ ಪುನರಾವರ್ತನೆಯಾಗಿದೆ. ದೇವರೊಂದಿಗೆ ನಿಕಟವಾಗಿ ಆತನ ಒಡನಾಟದಲ್ಲಿರುವುದನ್ನು ಈ ಪದವು ಸೂಚಿಸುತ್ತದೆ.

ಹನೋಕನು ದೇವರೊಂದಿಗೆ ವೈಯಕ್ತಿಕವಾಗಿ ಇಟ್ಟುಕೊಂಡಿದ್ದ ಸಂಬಂಧವು ಬಹಳ ವಿಶೇಷವಾಗಿದ್ದರಿಂದ ದೇವರು ಅವನನ್ನು ಕರೆದುಕೊಂಡನು ಎಂದು ವಾಕ್ಯವು ತಿಳಿಸುತ್ತದೆ (ಆ.ಕಾಂಡ 5:24). ಈ ಪದವೃಂದವು ಆದಾಮನ ವಂಶಾವಳಿಯಲ್ಲಿ ವಿಶಿಷ್ಟವಾಗಿದ್ದಾಗ್ಯೂ ಇದು ದೇವರ ಅನ್ಯೋನ್ಯತೆಯಲ್ಲಿ ನಡೆದುಕೊಂಡವರಿಗೆ ತಕ್ಷಣವೇ ಪರದೈಸಿನಲ್ಲಿ ಮುಂದಿನ ಜೀವಿತವನ್ನು ನಡೆಸುತ್ತಾರೆ ಎಂಬುದನ್ನು ಸಮರ್ಥಿಸುವುದಿಲ್ಲ. ಯಾಕೆಂದರೆ ನೋಹನೂ ಸಹಾ ದೇವರ ಅನ್ಯೋನ್ಯತೆಯಲ್ಲಿ ನಡೆದುಕೊಂಡನು ಎಂದು ವಾಕ್ಯವು ಹೇಳುತ್ತದೆ (ಆ.ಕಾಂಡ 6:9). ಆದರೆ ಆತನು ಆದಾಮ ಮೆತೂಷಾಯೇಲ ಮತ್ತು ಇನ್ನಿತರ ಮನುಷ್ಯರಂತೆ ಸತ್ತುಹೋದನು. ಹನೋಕನಿಗೆ ಸಿಕ್ಕಿದ ಈ ವಿಶೇಷವಾದ ಕೃಪೆಯನ್ನು ಸಮರ್ಥಿಸುವ ಯಾವ ಕಾರಣವನ್ನು ಕೊಟ್ಟಿಲ್ಲದಿರುವುದು ನಮ್ಮಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತದೆ. ಹನೋಕನು ದೇವರು ತನಗೆ ಪ್ರಕಟಿಸಿದ ನೀತಿಯನ್ನು ಜನರಿಗೆ ಬೋಧಿಸುವ ಬೋಧಕನಾದನು. ಕರ್ತನಿಗೆ ಭಯಪಟ್ಟು ನಡೆದುಕೊಳ್ಳುವವರು ಹನೋಕನ

ಬೋಧನೆಯಲ್ಲಿ ಮತ್ತು ಪ್ರಾರ್ಥನೆಯಲ್ಲಿ ಪಾಲು ಹೊಂದಲು ಹಂಬಲಿಸಿದರು. ಎಚ್ಚರಿಕೆಯ ಮಾತುಗಳನ್ನು ಕೇಳುವವರೆಲ್ಲರಿಗೂ ದೇವರ ಸಂದೇಶಗಳನ್ನು ಕೊಟ್ಟು ಸಾರ್ವಜನಿಕರಿಗಾಗಿ ದುಡಿಯುತ್ತಿದ್ದನು. ಆತನು ತನ್ನ ಸಂದೇಶಗಳನ್ನು ಸೇತನ ವಂಶದವರಿಗೆ ಮಾತ್ರವೇ ದುಡಿಯದೆ ಇತರಿಗಾಗಿಯೂ ದುಡಿಯುತ್ತಿದ್ದನು. ದೇವರ ಸಾನಿಧ್ಯದಿಂದ ತಪ್ಪಿಸಿಕೊಂಡು ಕಾಯಿನನು ಅಲೆಯುತ್ತಿದ್ದ ದೇಶದಲ್ಲೂ ಸಹಾ ತನ್ನ ದರ್ಶನದಲ್ಲಿ ಕಂಡ ಅದ್ಭುತವಾದ ದೃಶ್ಯಗಳನ್ನು ಪ್ರವಾದಿಯಾದ ಹನೋಕನು "ಇಗೋ ಕರ್ತನು ಲಕ್ಷಾಂತರ ಪರಿಶುದ್ಧ ದೂತರನ್ನು ಕೂಡಿಕೊಂಡು ಎಲ್ಲರಿಗೆ ನ್ಯಾಯತೀರಿಸುವುದಕ್ಕೂ ಭಕ್ತಿಹೀನರೆಲ್ಲರೂ ಮಾಡಿದ ಭಕ್ತಿಯಿಲ್ಲದ ಪಾಪಿಷ್ಠರು ತನ್ನ ಮೇಲೆ ಹೇಳಿದ ಎಲ್ಲಾ ಕಠಿಣವಾದ ಮಾತುಗಳ ವಿಷಯವಾಗಿ ಅವರನ್ನು ಖಂಡಿಸುವುದಕ್ಕೂ ಬಂದನು" ಎಂಬುದಾಗಿ ತಿಳಿಯಪಡಿಸಿದನು (ಯೂದ 14,15)"– ಎಲೆನ್ ಜಿ ವೈಟಮ್ಮನವರ "ನಮ್ಮ ಪೂರ್ವಿಕರು ಮತ್ತು ಪ್ರವಾದಿಗಳು" ಎಂಬ ಪುಸ್ತಕದಲ್ಲಿ 86ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಕಾಯಿನನು ತನ್ನ ತಮ್ಮನನ್ನು ಯಾಕೆ ಕೊಂದನು? ಎಲೀವೀಸಲ್ ಎಂಬವರು ಮಾಡಿರುವ ವಿಮರ್ಶೆಯನ್ನು ಓದಿರಿ: "ಯಾಕೆ ಕಾಯಿನನು ಅದನ್ನು ಮಾಡಿದನು? ಬಹುಶಃ ತನ್ನ ತಂದೆ ತಾಯಿಗಳಿಗೆ ಒಬ್ಬನೇ ಮಗನಾಗಿ ಮತ್ತು ಅವರು ಸತ್ತನಂತರ ಒಬ್ಬನೇ ಮನುಷ್ಯನಾಗಿ ಉಳಿಯಬೇಕೆಂದು ಮಾಡಿರಬೇಕು. ದೇವರಂತೆ ಒಬ್ಬನೇ ಆತನ ಸ್ಥಾನದಲ್ಲಿ ತಾನಿರಬೇಕೆಂದುಕೊಂಡು ಕಾಯಿನನು ತನ್ನ ತಮ್ಮನನ್ನು ಕೊಂದಿರಬೇಕು. ಯಾವುದೇ ಮನುಷ್ಯನು ತನ್ನನ್ನು ತಾನು ದೇವರನ್ನಾಗಿ ಮಾಡಿಕೊಂಡರೆ ಮನುಷ್ಯರನ್ನು ಹತ್ಯೆ ಮಾಡುವವನಾಗುತ್ತಾನೆ. *Messages of God: Biblical portraits and legends* (Newyork: Random House 1976) 58ನೇ ಪುಟ.

   ನಾವು ಕಾಯಿನನಂತೆ ಕೊಲೆ ಮಾಡದೆ ಹೋದಾಗ್ಯೂ ಅವನ ಮನೋಭಾವವನ್ನು ಪ್ರತಿಬಿಂಬಿಸುವವರಾಗದೆ ಇರುವುದಕ್ಕೆ ಎಚ್ಚರಿಕೆ ವಹಿಸುವುದು ಹೇಗೆ?

2. ಜಲಪ್ರಳಯಕ್ಕೆ ಮುಂಚೆ ಇದ್ದವರ ಜೀವಿತಾವಧಿಯನ್ನು (ಆದಿಕಾಂಡ 5) ನಮ್ಮ ಪೂರ್ವಿಕರದಕ್ಕೆ ಹೋಲಿಸಿರಿ. ಮನುಷ್ಯರ ಜೀವಿತಾವಧಿಯ ಕಡಿಮೆಯಾದುದನ್ನು ಹೇಗೆ ವಿವರಿಸಬಹುದು? ವಯಸ್ಸಿನ ಈ ಇಳಿಕೆಯು ಆಧುನಿಕ ಡಾರ್ವಿನ್ನನ ವಾದವನ್ನು ಹೇಗೆ ವಿರೋಧಿಸುತ್ತದೆ?